ವಿಶ್ವದ ಸೆಣಬು ಉತ್ಪನ್ನದಲ್ಲಿ ಭಾರತದ ಪಾಲು ಶೇ. 60. ಆದರೆ, ಸೆಣಬು ಪೇಟೆಯಲ್ಲಿ ಮುಂಚೂಣಿಯಲ್ಲಿರುವುದು ಭಾರತವಲ್ಲ, ಬಾಂಗ್ಲಾ! ಭಾರತದ ಸೆಣಬು ಉದ್ಯಮಕ್ಕೀಗ ಸಂಕಷ್ಟದ ಕಾಲ. ಬಾಂಗ್ಲಾದಿಂದಲೇ ಸೆಣಬು ಉತ್ಪನ್ನಗಳನ್ನು ಆಮದು ಮಾಡುವ ಸ್ಥಿತಿಗೆ ತಲುಪಿದೆ ಎನ್ನುವುದು ನಂಬಲಾಗದ ಸತ್ಯ, ನುಂಗಲಾಗದ ತುತ್ತು. ಈ ಸ್ಥಿತಿಗೆ ಕಾರಣವೇನು? ಉತ್ತರದ ತೋರುಬೆರಳು ಸರ್ಕಾರದತ್ತ ಹೊರಳುತ್ತದೆ. ಪೇಟೆಯಲ್ಲಿನ ಕಳವಳಕ್ಕೆ, ಸೆಣಬಿನ ಹೊಳಪಿನ ಬದಲು ಪ್ಲಾಸ್ಟಿಕ್‌ನ ತಳುಕು ಬಳುಕಿಗೆ ಮಾರುಹೋಗಿರುವ ನಾಗರಿಕರೂ ಕಾರಣರಾಗಿದ್ದಾರೆ. ಕಸುಬುದಾರರ ಕೊರತೆ ಹಾಗೂ ತಂತ್ರಜ್ಞಾನದ ಬೆಂಬಲ ಇಲ್ಲದಿರುವುದೂ ಸೆಣಬಿನ ಸೆಣಸಿಗೆ ಹಿನ್ನಡೆ ಉಂಟುಮಾಡಿದೆ. ಸೆಣಬಿನ ಬೆನ್ನಿಗೆ ನಿಲ್ಲಬೇಕಾದುದು ಕೃಷಿ ಕ್ಷೇತ್ರದ ಹೊಳಪನ್ನು ಉಳಿಸುವ ಕ್ರಮವಷ್ಟೇ ಅಲ್ಲ, ಪರಿಸರಸ್ನೇಹಿ ನಡೆಯೂ ಹೌದು.

**■ ಗುರುರಾಜ್ ಎಸ್. ದಾವಣಗೆರೆ**

